ಖುಷಿಯಾಗುತ್ತಿದ್ದನೋ ಏನೋ! 'ಆತ್ಮಹತ್ಯೆ ಮಾಡಿಕೊಳ್ಳುವ ಅನೇಕರು ಯಾರಿಗೋ 'ಪಾಠ' ಕಲಿಸುತ್ತೇವೆಂದು ಕೂಡ ಹೊರಟಿರುತ್ತಾರೆ' ಎಂದು ಸೈಕಿಯಾಟ್ರಿಸ್ಟ್ ಒಬ್ಬ ಬರೆದದ್ದು ನೆನಪಾಯಿತು...

...ಈ ಥರದ ಯೋಚನೆಗಳಲ್ಲಿ ಗಾಡಿ ಓಡಿಸುತ್ತಿದ್ದ ಮಲ್ಲಿಕಾಗೆ ನಗು ಬಂತು. ಪೀಜಿ ತಲುಪಿದಾಗ ಇನ್ನೂ ಕರಗುಡುವ ಕತ್ತಲು. ಇನ್ನೇನು ಮೂರು ಗಂಟೆಯಾಗುತ್ತಿರಬಹುದು... ಇನ್ನು ಮೂರು ಗಂಟೆ ಕಳೆದರೆ, ನ್ಯೂಸ್ ಇನ್ ಚಾರ್ಜು, ಬಾಸು ಇಬ್ಬರೂ ಸ್ಟೋರಿಗಾಗಿ ಅರಚುತ್ತಾರೆ ಎನ್ನುವುದು ನೆನಪಾಗಿ ಕಿರಿಕಿರಿ ಶುರುವಾಯಿತು. ತಕ್ಷಣ ಪ್ಯಾಂಟ್ ಜೇಬಿನಿಂದ ಮೊಬೈಲ್ ಹೊರ ತೆಗೆದು, 'ನೋ ಸ್ಟೋರಿ. ದಯವಿಟ್ಟು ಪೀಡಿಸಬೇಡಿ. ರಜಾ ಮುಂದುವರಿಸಲು ಸಾಧ್ಯವಾಗದಿದ್ದರೆ ಇದನ್ನೇ ರಾಜೀನಾಮೆಯೆಂದು ತಿಳಿಯಿರಿ. ನನ್ನ ಮೊಬೈಲ್ ಸ್ವಿಚ್ ಆಫ್ ಆಗಿರುತ್ತದೆ. ನಾನು ಹಳೇ ಪೀಜಿಯಲ್ಲಿಲ್ಲ. ಬೇರೆ ಪೀಜಿಯಲ್ಲಿದ್ದೇನೆ. ಅನಗತ್ಯವಾಗಿ ಹುಡುಕಬೇಡಿ, ಪ್ಲೀಸ್' ಎಂದು ಮೆಸೇಜ್ ಒತ್ತಿದ ಮಲ್ಲಿಕಾ, ಥಟಾರನೆ ಮೊಬೈಲ್ ಹಿಸುಕಿ ಧಡ್ಡಂತ ಹಾಸಿಗೆಯ ಮೇಲೆ ಬಿದ್ದುಕೊಂಡಳು. ನಿದ್ದೆ ಕವುಚಿಕೊಳ್ಳುತ್ತಿರುವಂತೆ... ರಂಜಿತಾ ಸೇನಳ ಮೇಕಪ್ ಮಾಡಿದ ಸುಂದರ ಮುಖ... ಒಮ್ಮೊಮ್ಮೆ ಮೇಕಪ್ ಇಲ್ಲದಿದ್ದರೂ ಮೋಹಕವಾಗಿರುತ್ತಿದ್ದ ಮುಖ... ಹೆಣ್ಣಾದ ತನಗೇ ಸದಾ ನೋಡುತ್ತಲೇ ಇರಬೇಕೆನ್ನುವ ಅವಳ ಮುಖ... ಎಲ್ಲವೂ ಕಣ್ಣೆದುರು ಬರುತ್ತಲೇ ಇದ್ದವು. ಬೆಳಗ್ಗೆ ಎಷ್ಟೋ ಹೊತ್ತಿಗೆ ಎದ್ದಾಗ, ಕನಸು–ಎಚ್ಚರಗಳ ನಡುವೆ ರಂಜಿತಾ ಮಾತು, ನಗು, ಅಳು, ಬಿಗುವು, ಸಿಡುಕು... ಎಲ್ಲವೂ ಮತ್ತೆ ಮತ್ತೆ ಮುತ್ತುತ್ತಲೇ ಇದ್ದದ್ದು ಅರಿವಾಯಿತು...

